# ಗುರು ಪಥ

ಜ್ಞಾನಿಯಾಗಲಿ ಅಥವಾ ಅನುಭಾವಿಯಾಗಲಿ ತಮ್ಮ ಸಾಧನೆಗೆ ಎರಡು ಮಾರ್ಗಗಳನ್ನು ಅನುಸರಿಸಬಹುದು. ಮೊದಲನೆಯದು, ಗುರುವಿನ ಮೂಲಕ ಸಿದ್ಧಿ ಪಡೆಯುವುದು. ಇನ್ನೊಂದು ಶಾಸ್ತ್ರಾಧ್ಯಯನದ ಮೂಲಕ ಸಾಧನೆ ಪಡೆಯುವುದು. ಶಾಸ್ತ್ರಾಧ್ಯಯನದ ಮೂಲಕ ಬರುವ ತಿಳಿವು ನಡೆಯಾಗಿ ರೂಪುಗೊಳ್ಳದಿದ್ದರೆ, ಅದು ಸತ್ಯವನ್ನು ಕಾಣಿಸಲಾರದು. ಹೀಗೆ ಶಾಸ್ತ್ರಾಧ್ಯಯನದ ತಿಳಿವು ಇತರರಿಗೆ ಉಪದೇಶ ಮಾಡುವುದರಲ್ಲೇ ಕೊನೆಗೊಳ್ಳುತ್ತದೆ. ಗುರುಮಾರ್ಗದ ಮೂಲಕ ಕೇಳಿ ಪಡೆಯುವ ಅರಿವು ಹೆಚ್ಚು ಅನುಭವ ಮೂಲವೂ, ಜೀವಕಾರುಣ್ಯವೂ ಹಾಗೂ ದಯಾಪರವೂ ಆಗಿರುತ್ತದೆ. ಇದನ್ನೇ ಕಬೀರನ ಒಂದು ದೋಹೆ 'ಗುರುವಿನ ಕರುಣೆ ಎಂಬುದು ಫಲ ಕೊಡುವ ಮರವಿದ್ದಂತೆ. ಹಂಚಿದರೆ ಮುಕ್ತಿಯ ಫಲ ಕೊಡುವುದು, ಬಚ್ಚಿಟ್ಟುಕೊಂಡರೆ ನರಕದ ಬಾಗಿಲು ತೋರಿಸುವುದು' ಎಂದು ಹೇಳುತ್ತದೆ. 'ತತ್ತ್ವವಿಚಾರವನ್ನು ಯಾರು ವ್ಯಕ್ತಪಡಿಸುವರೋ, ಯಾರು ನಮ್ಮಲ್ಲಿ ಕಾಣುವ ವ್ಯತ್ಯಾಸಗಳನ್ನು ಏರಿಳಿತಗಳನ್ನು ಪರಿಶೀಲಿಸಿ ನನಗೆ ಜ್ಞಾನ ವಿಕಾಸವನ್ನುಂಟು ಮಾಡುವರೋ ಅವರೇ ಗುರುಗಳು. ಹೊರಗೆ ಹುಡುಕುವುದನ್ನು ತಪ್ಪಿಸಿ, ನಮ್ಮೊಳಗೇ ಇರುವ ಅರಿವ, ಜ್ಞಾನವನ್ನು ಹುಡುಕುವುದನ್ನು ಗುರು ಕಲಿಸುತ್ತಾನೆ' ಎನ್ನುತ್ತಾಳೆ ಕಾಶ್ಮೀರದ ಪ್ರತ್ಯಭಿಜ್ಞಾ ಶೈವಪಂಥದ ಸಾಧಕಿ ಲಲ್ಲೇಶ್ವರಿ. ಕನ್ನಡದ ಅನುಭಾವಿ ಪರಂಪರೆ ಇದನ್ನೇ ಅಂಗೈಯಲ್ಲಿ ದೀಪವಿಟ್ಟಂತೆ ಹೇಳುತ್ತದೆ,– 'ಅರಿವೇ ಗುರು'.

ಅಶಾಂತಿಗೆ ಕಾರಣವಾಗುವ ಕಾಮ, ಕ್ರೋಧ, ದ್ವೇಷಾಸೂಯೆಗಳೇ ಮೊದಲಾದ ವ್ಯಸನಗಳಿಂದ ನಾವು ನಮ್ಮ ಸುತ್ತಲೂ ನೇಯ್ದುಕೊಂಡು ಬಂಧಿಸಿಕೊಂಡಿರುವ ಕೋಶಾವರಣದಿಂದ ಬಿಡುಗಡೆ ಪಡೆದು, ಬೇರೊಂದು ರೂಪದಲ್ಲಿ ಹೊರಬರುವಂತೆ ಮಾಡಲು ಗುರುವಿನ ಕರುಣೆ ಅತ್ಯವಶ್ಯ. ಆಗ ಲೌಕಿಕ ಪ್ರಪಂಚದ ಸೆಳೆತಗಳು ಇವನನ್ನು ಆಕರ್ಷಿಸಲಾರವು. ಇದರಿಂದಾಗಿ 'ನಾನು', 'ನೀನು' ಎಂಬ ಭೇದಭಾವ ಅಳಿಯುತ್ತದೆ. ಈ ಸ್ಥಿತಿಯೇ 'ಸಿದ್ಧಾವಸ್ಥೆ'. ಈ ಸ್ಥಿತಿಗೆ ತಲುಪಿದವನು ತತ್ತ್ವದೃಷ್ಟಿಯುಳ್ಳವನಾಗಿರುತ್ತಾನೆ ಎಂದು ಕಾಶ್ಮೀರ ಶೈವದರ್ಶನ ಹೇಳುತ್ತದೆ. ಗುರು ಮಾರ್ಗದಿಂದ ದಕ್ಕಿಸಿಕೊಂಡ ಫಲವನ್ನು ಅನುಭಾವಿಯು ನಮಗೆ ನೀಡುವ ಬಗೆ ಹೀಗಿದೆ: 'ನಾನು ಇದ್ದಾಗ ಗುರುವಿರಲಿಲ್ಲ, ಈಗ ಗುರುವಿದ್ದಾನೆ ನಾನಿಲ್ಲ!' ಹೀಗೆ ಗುರು ಎನ್ನುವವನು 'ನಾನು' ಎಂಬ ಮನೋ ಅಹಂಕಾರವನ್ನು ತೊಡೆದು ಬಯಲಾಗುವ ದಾರಿಯನ್ನು ತೋರುತ್ತದೆ. ಝೆನ್ ಪಥವೂ ಕೂಡ ಗುರು ಕೇಂದ್ರಿತವಾದದ್ದು. ಶಿಷ್ಯರಲ್ಲಿ ಇರುವ 'ನಾನು' ಎಂಬ ಅಹಂಕಾರವನ್ನು ತೊಡೆಯುವುದರಲ್ಲೇ ಝೆನ್ ಗುರು ಮಗ್ನವಾಗಿರುತ್ತಾನೆ. ಈ ಗುರು ಮಾರ್ಗದಲ್ಲಿ ಶಾಸ್ತ್ರಾಧ್ಯಯನಕ್ಕಿಂತ, ಅನುಭವ ಮೂಲವಾದ ಗುರು ಬೋಧನೆಗೆ ಹೆಚ್ಚು ಪ್ರಾಶಸ್ತ್ಯ. ಆದ್ದರಿಂದಲೇ ಬುದ್ಧದೇವ 'ನಾನು ಹೇಳಿದೆ ಎಂದು ನಂಬಬೇಡ. ಶಾಸ್ತ್ರಗ್ರಂಥಗಳು ಹೇಳುತ್ತವೆ ಎಂದು ನಂಬಬೇಡ. ಹಿರಿಯರು ಹೇಳುತ್ತಾರೆ ಎಂದು ನಂಬಬೇಡ. ನಿನ್ನ ಅನುಭವದಲ್ಲಿ ಬಂದದ್ದನ್ನು ಮಾತ್ರ ಒಪ್ಪಿಕೊಂಡು ಮುನ್ನಡೆ. ನಿನಗೆ ನೀನೆ ಬೆಳಕು' ಎಂದು ಹೇಳಿದ.

ಈ ಹಿನ್ನೆಲೆಯಲ್ಲಿ ಕನ್ನಡದ ವಚನಕಾರರು ಮತ್ತು ತತ್ತ್ವಪದಕಾರರ ಪರಂಪರೆಗಳು ಗುರುಮಾರ್ಗ ಕೇಂದ್ರಿತವಾದವು. ಜಾತ್ಯತೀತ ಮನೋಭಾವದ ಗುರುಮಾರ್ಗದಲ್ಲಿ ಶರಣಾಗತಿಯಿಲ್ಲ! ಯಾರನ್ನೂ, ಯಾವುದನ್ನೂ ಅಧೀನನನ್ನಾಗಿ ಮಾಡಿಕೊಳ್ಳುವುದಿಲ್ಲ! ದೇಹದೊಳಗೆ ದೇವಾಲಯವಿದ್ದು, ಮತ್ತೆ ಬೇರೆ ದೇವಾಲಯವೇಕೆ? ಎಂದು ಪ್ರಶ್ನಿಸುವ ಇವರಿಗೆ, ಹೋಮ–ಹವನಗಳು, ಶಾಸ್ತ್ರಾಧ್ಯಯನ, ತರ್ಕ ಇರುವುದಿಲ್ಲ! ಇವರಿಗೆ ವೇದವೆಂಬುದು ಓದಿನ ಮಾತು, ತರ್ಕವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ. ಇವುಗಳ ಜೊತೆಗೆ ಜಾತಿ ಕಟ್ಟಳೆಗಳು, ವಿಧಿನಿಷೇಧಗಳು ಇರುವುದಿಲ್ಲ. ಇದೊಂದು ರೀತಿಯ ನಿರ್ಗುಣಾರಾಧನೆಯ ಮಾರ್ಗ. ಎಲ್ಲಿಯವರೆಗೆ ಗುರುವಿನ ಗುಣಕೀರ್ತಿ ಮಾಡುತ್ತಿರುತ್ತಾರೋ ಅಲ್ಲಿವರೆಗೆ ಗುರುವನ್ನು ಅವರು ಅರಿತಿರುವುದಿಲ್ಲ ಎಂದು ತಿಳಿಯಲಾಗುತ್ತದೆ. ಅವರು ಸಾಬೂನು, ನೀರು ಇಲ್ಲದೆಯೇ ಒಳಗಿನ ಕಶ್ಮಲವನ್ನು ನಿರ್ಮಲಗೊಳಿಸುವವರು. ಈ ಪಥದಲ್ಲಿ ದೇವರಿಗಿಂತ ಗುರುವೇ ಶ್ರೇಷ್ಠ. ಆದ್ದರಿಂದಲೇ 'ಗುರು ಮಾರ್ಗಗಳದ್ದು ದೇವರಿಲ್ಲದ ದರ್ಶನ' ಎಂದು ಕರೆಯುತ್ತಾರೆ. ಈ ಮಾರ್ಗದಲ್ಲಿ ಗುರು ಮತ್ತು ಶಿಷ್ಯರದ್ದು ಮೇಲು, ಕೀಳು ಇಲ್ಲದ ಪರಸ್ಪರ ಸಾಮರಸ್ಯದ ದೃಷ್ಟಿ. ಕಾಲದ ಕಟ್ಟಳೆಯಲ್ಲಿ ಗುರುವೇ ಶಿಷ್ಯನಾಗುವ, ಶಿಷ್ಯನೇ ಗುರುವಾಗುವ ಪಥ ಇದು.

ಹಾಗೆಯೇ ನಮ್ಮಲ್ಲಿ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎನ್ನುವ ಮತ್ತೊಂದು ಗುರು ಪರಂಪರೆಯೂ ಇದೆ. ಶಾಸ್ತ್ರಾಧ್ಯಯನ, ತರ್ಕ, ಆರಾಧನೆ, ಶರಣಾಗತಿ ಈ ಪರಂಪರೆಯ ಕೆಲವು ಲಕ್ಷಣಗಳು. ಈ ಪಥದಲ್ಲಿ ಕರ್ಣ, ಏಕಲವ್ಯರಂಥ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟ ಪ್ರತಿಭೆಗಳಿಗೆ ಅರಳುವ ಅವಕಾಶಗಳು ಇರುವುದಿಲ್ಲ. ಪುರಾಣ ಭಾರತದಿಂದ ಮೊದಲುಗೊಂಡು, ಇಂದಿನ ವರ್ತಮಾನದ ಭಾರತದವರೆಗೂ ಕರ್ಣ, ಏಕಲವ್ಯರಂತೆ ಕೇವಲ ಜಾತಿಯ ಕಾರಣದಿಂದಾಗಿ ದಮನಿಸಲ್ಪಟ್ಟ ಸಾವಿರಾರು ಪ್ರತಿಭೆಗಳ ಉದಾಹರಣೆಗಳನ್ನು ಕೊಡಬಹುದು! ಆಚಾರ್ಯ ಗುರುಕುಲ ಪದ್ಧತಿಯಲ್ಲಿ ಪ್ರಶ್ನಿಸುವುದಕ್ಕಿಂತ, ಗುರು ಬೋಧಿಸಿದ್ದನ್ನು ಸಂದೇಹವಿಲ್ಲದ ಕೇಳುವಿಕೆಗೆ ಹಾಗೂ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಮಾತ್ರ ಆದ್ಯತೆ.

ಏಕಲವ್ಯನ ಜ್ಞಾನ ದಾಹ ಹಾಗೂ ಜಾತಿಯ ಗೆರೆಯನ್ನು ಮೀರದ ದ್ರೋಣಾಚಾರ್ಯನ ಕುಟಿಲತನವನ್ನು ಕುವೆಂಪು 'ಬೆರಳ್‌ಗೆ ಕೊರಳ್' ಕೃತಿಯಲ್ಲಿ ಜಾತಿ ಪದ್ಧತಿಯ ವಿಕೃತರೂಪವನ್ನು ಅನಾವರಣಗೊಳಿಸಿದರು. ಈ ಆಚಾರ್ಯ ಗುರು ಪರಂಪರೆ ವಿನಾಕಾರಣ ಬೇಡ ಹುಡುಗ ಏಕಲವ್ಯನ ಹೆಬ್ಬೆರಳನ್ನು ನಿರ್ದಯವಾಗಿ ಬಲಿ ತೆಗೆದುಕೊಳ್ಳಲು ಹಿಂದುಮುಂದು ನೋಡುವುದಿಲ್ಲ ಎಂಬುದನ್ನು ಈ ಕೃತಿ ನಮ್ಮ ಮುಂದಿಡುತ್ತದೆ. ಎಲ್ಲಿಯವರೆಗೆ ಎಲ್ಲ ಜಾತಿಯ, ಎಲ್ಲ ಹಿನ್ನೆಲೆಯ ಜನರಿಗೆ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವ ಅವಕಾಶ ಇರುವುದಿಲ್ಲವೋ ಅಲ್ಲಿಯವರೆಗೆ ನಿರ್ಲಕ್ಷಿತರ ಸ್ವಾಭಿಮಾನ, ಸ್ವಾಯತ್ತತೆ, ಸಂಪತ್ತು ಹಾಗೂ ಕ್ರಿಯಾಶೀಲತೆಗಳು ಮುರುಟಿಹೋಗುತ್ತವೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಭಾಷೆಯು ಭಾವನೆಯ ಪ್ರತಿಬಿಂಬ.
  —ಶ್ರೀರಂಗ
- ಹುಲಿಗೆ ಹುಲ್ಲು ತಿನ್ನುವುದನ್ನು ಕಲಿಸಬಹುದು. ಮೂರ್ಖನಿಗೆ ನೀತಿಯನ್ನು ಕಲಿಸುವುದು ಕಷ್ಟ.
  —ಗಾದೆ
- ನೀವು ಸತ್ಯವನ್ನು ಹೇಳುವುದಾದರೆ, ಏನನ್ನೂ ನೆನಪಿಸಿಕೊಳ್ಳಬೇಕಾಗಿಲ್ಲ.
  —ಮಾರ್ಕ್ ಟ್ವೇನ್
- ನಾವು ಮಾಡುವ ಕಾರ್ಯವು ಕಾರಣಗಳ ಅನುರೂಪವಾಗಿರುತ್ತದೆ.
  —ಅನುಪಮಾ ನಿರಂಜನ
- ಇಂದು ಮಿತಿಮೀರಿದ ಆಸೆಯೇ ಜಗತ್ತಿನ ಜೀವನವನ್ನೆಲ್ಲಾ ರೂಪಿಸುತ್ತಿದೆ.
  —ಸಿಂಪಿ ಲಿಂಗಣ್ಣ
- ಪ್ರತಿಭೆ ನಿಜವಾಗಿಯೂ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು.
  —ತೀ.ನಂ.ಶ್ರೀ.
- ಇಂದ್ರಿಯಗಳ ದಾಸನು ದುಃಖಗಳ ದಾಸನೂ ಆಗುತ್ತಾನೆ.
  —ಐನ್‌ಸ್ಟೀನ್
- ಸ್ವಾರ್ಥವನ್ನು ಗೆದ್ದವನು ಶಾಂತಿಯನ್ನು ಪಡೆದವನು ಸತ್ಯವನ್ನು ಬಲ್ಲವನೇ ನಿಜವಾದ ಸುಖಿ.
  —ಗೌತಮ ಬುದ್ಧ
- ಕೇವಲ ಕಠಿಣವಾದ ದಾರಿಗಳು ಮಾತ್ರ ಸುಂದರವಾದ ತಾಣಗಳಿಗೆ ಕರೆದೊಯ್ಯುತ್ತವೆ.
  —ಅನಾಮಿಕ
- ಯುದ್ಧ ಮಾಡುವವನು ತಾನು ಯಾಕೆ ಯುದ್ಧ ಮಾಡುತ್ತಿದ್ದೇನೆ ಎನ್ನುವ ಕಾರಣವನ್ನು ಸ್ಪಷ್ಟವಾಗಿ ಪ್ರಾಮಾಣಿಕವಾಗಿ ತಿಳಿದಿರಬೇಕು.
  —ಎಸ್.ಎಲ್. ಭೈರಪ್ಪ